ಓ.ಎಸ್.47/2020

ಪಿ.ಡಬ್ಲ್ಯೂ-3

ದಿನಾಂಕಃ **11.08.2025** ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಂ.ಎಂ. ವಕೀಲರಿಂದಃ

ವಾದಿ ಈ ದಾವೆಯನ್ನು ಲಕ್ಷ್ಮೀನಾರಾಯಣ ಮತ್ತು ಇತರರ ವಿರುದ್ಧ ಮನೆಯ ವಿಚಾರವಾಗಿ ಹೂಡಿರುತ್ತಾರೆ. ದಾವಾ ಸ್ವತ್ತು ಗ್ರಾಮ ಠಾಣಾ ವ್ಯಾಪ್ತಿಯಲ್ಲಿರುತ್ತದೆ. ಪ್ರತಿವಾದಿಗಳು ಸರ್ವೆ ನಂ. 28/21 ರಲ್ಲಿ ಮೂರು ಮನೆಗಳನ್ನು ಕಟ್ಟಿಕೊಂಡಿರುತ್ತಾರೆ ಎಂದರೆ ಸರಿ. ಪ್ರತಿವಾದಿಗಳು ಕಟ್ಟಿಕೊಂಡಿರುವ ಮನೆಗಳಿಗೆ ಪೂರ್ವಕ್ಕೆ-ರಸ್ತೆ, ಪಶ್ಚಿಮಕ್ಕೆ-ರಸ್ತೆ ಮತ್ತು ಕೆರೆ ಕಾಲುವೆ, ಉತ್ತರಕ್ಕೆ- ಸರ್ವೆ ನಂ.28/21 ರಲ್ಲಿನ ಉಳಿಕೆ ಜಮೀನು, ದಕ್ಷಿಣಕ್ಕೆ- ಸರ್ವೆ ನಂ.28/21 ರಲ್ಲಿನ ಉಳಿಕೆ ಜಮೀನು ಪ್ರಸ್ತುತ ನರಸಿಂಹಮೂರ್ತಿ ಕಟ್ಟಿರುವ ಮನೆ ಇರುತ್ತದೆ ಎಂದರೆ ಸರಿ. ಈ ಮೇಲೆ ಹೇಳಿದ ಚಕ್ಕುಬಂಧಿಯ ಮಧ್ಯೆ ಇರುವ ಸ್ವತ್ತನ್ನು ವಾದಿ ಈ ದಾವೆಯನ್ನು ಹೂಡಿ ಕೇಳುತ್ತಿರುತ್ತಾರೆ ಎಂದರೆ ಸರಿ.

**2.** ವಾದಿಗೆ ನಾಗಮ್ಮ ಕೋಂ ಅಂಜಪ್ಪರವರು ಕ್ರಯ ಪತ್ರ ಬರೆದುಕೊಟ್ಟಾಗ ನಾನು ಹಾಜರಿರಲಿಲ್ಲ. ಸದರಿ ಸ್ವತ್ತನ್ನು ನಾಗಮ್ಮ ಖರೀದಿ ಮಾಡಿರುತ್ತಾರೆ. ವಾದ ಪತ್ರದಲ್ಲಿ ನಮೂದು ಮಾಡಿರುವ ದಾವಾ ಸ್ವತ್ತಿನ ಚಕ್ಕುಬಂಧಿಯ ಮಧ್ಯೆ ಇರುವಂತಹ ಸ್ವತ್ತು ವಾದಿಗೆ ಕ್ರಯ ಪತ್ರ ಬರೆದುಕೊಟ್ಟಿರುವಂತಹ ನಾಗಮ್ಮನವರ ಮಾಲೀಕತ್ವಕ್ಕೆ ಸೇರಿದ್ದು ಎಂಬುದಕ್ಕೆ ನಾನು ದಾಖಲೆಗಳನ್ನು ನೋಡಿರುವುದಿಲ್ಲ. ನಾಗಮ್ಮ ಕೋಂ ಅಂಜಪ್ಪನವರಿಗೆ ಊರಿನಲ್ಲಿ ಗ್ರಾಮ ಠಾಣಾ ಸ್ವತ್ತಿನ ಖಾತೆ ನಂ. 141 ರಲ್ಲಿ ಆಸ್ತಿ ಇತ್ತು ಎಂದರೆ ಸರಿ. ಗ್ರಾಮ ಠಾಣಾ ಸ್ವತ್ತಿನ ಖಾತೆ ನಂ. 141 ನ್ನು ನಮೂದು ಮಾಡಿ ಪ್ರತಿವಾದಿಗಳಿಗೆ ಸೇರಿದ ಸ್ವತ್ತಿನ ಚಕ್ಕುಬಂಧಿಯನ್ನು ನಮೂದು ಮಾಡಿಸಿ ಕ್ರಯ ಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ. ಗ್ರಾಮ ಠಾಣಾ ಸ್ವತ್ತಿನ ಸಂಖ್ಯೆ 141 ಕ್ಕೆ ಇರುವಂತಹ ಚಕ್ಕುಬಂಧಿ ಮತ್ತು ಕ್ರಯ

ಪತ್ರದಲ್ಲಿ ನಮೂದು ಮಾಡಿರುವ ಚಕ್ಕುಬಂಧಿ ಬೇರೆ-ಬೇರೆಯಾಗಿರುತ್ತದೆ ಎಂದು ಸೂಚಿಸುವುದು ಸರಿಯಲ್ಲ. ಪ್ರತಿವಾದಿಗಳು ಕಟ್ಟಿಕೊಂಡಿರುವ ಮನೆಗಳ ಖಾತೆ ನಂಬರ್ 68 ಮತ್ತು 70 ಎಂದರೆ ನನಗೆ ಗೊತ್ತಿರುವುದಿಲ್ಲ.

**3.** ವಾದಿಗೆ ಕ್ರಯ ಪತ್ರ ಬರೆದುಕೊಟ್ಟ ನಾಗಮ್ಮನವರಿಗೆ ಸೇರಿದ ಆಸ್ತಿ ಬೇರೆಯಾಗಿದ್ದರೂ ಪ್ರತಿವಾದಿಗಳಿಗೆ ಸೇರಿದ ಸ್ವತ್ತಿಗೆ ಸಂಬಂಧಿಸಿದಂತೆ ಕ್ರಯ ಪತ್ರ ಬರೆದುಕೊಟ್ಟಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ. ವಾದಿಗೆ ಸಹಾಯ ಮಾಡುವ ಉದ್ದೇಶದಿಂದ ವಾದಿಯ ಹೇಳಿಕೆಯ ಮೇರೆಗೆ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

**4.** ದಾವಾ ಸ್ವತ್ತಿನಲ್ಲಿ ಪ್ರತಿವಾದಿಗಳೇ ಸ್ವಾಧೀನದಲ್ಲಿರುವುದರಿಂದ ಪ್ರತಿವಾದಿಗಳು ವಾದಿಯ ದಾವಾ ಸ್ವತ್ತಿನ ಸ್ವಾಧೀನಕ್ಕೆ ತೊಂದರೆ ನೀಡುತ್ತಿರುತ್ತಾರೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯಾದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಸಹಿ/-

(ಶ್ರೀ ಅಮರನಾಥ ಬಿ.ಎನ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಮಧುಗಿರಿ